RNU AIR DHARWAD

MAY 17, 2024

ALL INDIA RADIO - DHARWAD

PRADESH SAMACHARA (KANNADA) 7:05 AM

<><><>

ಆಕಾಶವಾಣಿ

ಪ್ರದೇಶ ಸಮಾಚಾರ

ಓದಿದವರು: ಹರ್ಷವರ್ಧನ ಶೀಲವಂತ

<><><>

ಮುಖ್ಯಾಂಶಗಳು:

<><><>

- ಐ.ಸಿ.ಸಿ. ಪುರುಷರ ಟಿ–20 ವಿಶ್ವ ಕಪ್ ಟೂರ್ನಿ; ಅಂತಾರಾಷ್ಟ್ರೀಯ ಕ್ರಿಕೆಟಿಗರ ಜೆರ್ಸಿ ಮೇಲೆ, ನಂದಿನಿ ಬ್ರ್ಯಾಂಡ್ – ಮುಖ್ಯಮಂತ್ರಿ ಸಿದ್ದರಾಮಯ್ಯ.
- ಯುವತಿಯರ ಹತ್ಯೆ ಪ್ರಕರಣಗಳ ವಿಚಾರಣೆಗೆ, ವಿಶೇಷ ಅಭಿಯೋಜಕರ ನೇಮಕಕ್ಕೆ ಚಿಂತನೆ – ಜಿ. ಪರಮೇಶ್ವರ.
- ಕರ್ನಾಟಕ ಸೇರಿ, ದಕ್ಷಿಣ ಭಾರತದ ನಾಲ್ಕು ರಾಜ್ಯಗಳಲ್ಲಿ, ಇದೇ 23 ರಿಂದ, ಆನೆ ಗಣತಿ.
- ಭಾರತೀಯ ಫುಟ್‌ಬಾಲ್ ದಿಗ್ಗಜ ಸುನಿಲ್ ಚೆಟ್ರಿ, ಅಂತಾರಾಷ್ಟ್ರೀಯ ಪಂದ್ಯಗಳಿಗೆ ವಿದಾಯ.

<><><>

ಈಗ ವಾರ್ತೆಗಳ ವಿವರ

<><><>

ಅಮೆರಿಕಾ ಮತ್ತು ವೆಸ್ಟ್ ಇಂಡೀಸ್‌ನಲ್ಲಿ, ಜೂನ್ 1 ರಿಂದ ಆರಂಭವಾಗಲಿರುವ ಐ.ಸಿ.ಸಿ. ಪುರುಷರ ಟಿ 20 ವಿಶ್ವ ಕಪ್ ಟೂರ್ನಿಯಲ್ಲಿ, ಮೊದಲ ಬಾರಿಗೆ ಅಂತಾರಾಷ್ಟ್ರೀಯ ಕ್ರಿಕೆಟಿಗರ ಜೆರ್ಸಿಗಳ ಮೇಲೆ, ನಂದಿನಿ ಬ್ರ್ಯಾಂಡ್ ಪ್ರದರ್ಶನಗೊಳ್ಳಲಿದೆ. ಐರ್ಲೆಂಡ್ ಮತ್ತು ಸ್ಕಾಟ್ಲೆಂಡ್ ತಂಡಗಳ ಆಟಗಾರರು, ಕನ್ನಡ ಮತ್ತು ಇಂಗ್ಲಿಷ್‌ನಲ್ಲಿ, ಕೆ.ಎಂ.ಎಫ್. ನಂದಿನಿಯ ಲಾಂಛನವಿರುವ, ಜೆರ್ಸಿಯನ್ನು ಧರಿಸಿ ಕಣಕ್ಕಿಳಿಯಲಿದ್ದಾರೆ.

<><><>

ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳದ, ನಂದಿನಿ ಬ್ರ್ಯಾಂಡ್ ಉತ್ಪನ್ನಗಳಿಗೆ, ಜಾಗತಿಕ ಮಟ್ಟದಲ್ಲಿ ಮಾರುಕಟ್ಟೆ ಸೃಷ್ಟಿಸಲು, ಈ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು, ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ. ರಾಜ್ಯದ ಉತ್ಕೃಷ್ಟ ಗುಣಮಟ್ಟದ ಹಾಲಿನ ಉತ್ಪನ್ನಗಳು ಮತ್ತು ನಾಡಿನ ರೈತರ ಶ್ರಮ ಎರಡನ್ನೂ ವಿಶ್ವಕ್ಕೆ ಪರಿಚಯಿಸುವ ಉದ್ದೇಶ ಹೊಂದಲಾಗಿದೆ.

ನಂದಿನಿ ಉತ್ಪನ್ನಗಳು ಈಗಾಗಲೇ ಮಲೇಶಿಯಾ, ವಿಯೆಟ್ನಾಮ್, ಸಿಂಗಪೂರ, ಅಮೆರಿಕಾ, ದುಬೈ ಹಾಗೂ ಯು.ಎ.ಇ. ಗಳಲ್ಲಿ ಹೆಸರುವಾಸಿಯಾಗಿದೆ ಎಂದು ಅವರು ಹೇಳಿದ್ದಾರೆ.

<><><>

ಧಾರವಾಡ ಮತ್ತು ಕೊಡಗು ಸೇರಿದಂತೆ, ವಿವಿಧ ಜಿಲ್ಲೆಗಳಲ್ಲಿ ಇತ್ತೀಚೆಗೆ ನಡೆದ, ಯುವತಿಯರ ಹತ್ಯೆ ಪ್ರಕರಣಗಳನ್ನು, ಗಂಭೀರವಾಗಿ ಪರಿಗಣಿಸಲಾಗಿದೆ. ಕಾಲಮಿತಿಯಲ್ಲಿ ತನಿಖೆಗಳನ್ನು ಪೂರ್ಣಗೊಳಿಸಿ, ಕೊಲೆಗಡುಕರನ್ನು ಕಾನೂನಿನಡಿ ಸೂಕ್ತ ಶಿಕ್ಷೆಗೆ ಗುರಿ ಪಡಿಸಲಾಗುವುದು ಎಂದು, ಗೃಹ ಖಾತೆ ಸಚಿವ ಡಾಕ್ಟರ್ ಜಿ. ಪರಮೇಶ್ವರ ಹೇಳಿದ್ದಾರೆ. ಕೊಡಗು ಜಿಲ್ಲೆ, ಸೂರ್ಲಬ್ಬಿ ಗ್ರಾಮದಲ್ಲಿ ಬರ್ಬರವಾಗಿ ಹತ್ಯೆಗೀಡಾದ, ಬಾಲಕಿ  ಮೀನಾ ಮನೆಗೆ ಭೇಟಿ ನೀಡಿ, ಆಸ್ಪತ್ರೆಯಿಂದ ಬಿಡುಗಡೆಯಾದ ಅವರ ತಾಯಿ ಮತ್ತು ಕುಟುಂಬಕ್ಕೆ ಸಚಿವರು ಸಾಂತ್ವನ ಹೇಳಿದರು. ಇಂತಹ ಪ್ರಕರಣಗಳಲ್ಲಿ ವಾದ ಮಂಡಿಸಲು, ವಿಶೇಷ ಅಭಿಯೋಜಕರ ನೇಮಕಕ್ಕೆ ರಾಜ್ಯ ಸರ್ಕಾರ ಚಿಂತನೆ ನಡೆಸಿದೆ ಎಂದು, ಪರಮೇಶ್ವರ್ ತಿಳಿಸಿದರು.

<><><>

ಹಾಸನ ಸಂಸದ ಪ್ರಜ್ವಲ್ ರೇವಣ್ಣ ಆರೋಪಿಯಾಗಿರುವ, ಪೆನ್‌ಡ್ರೈವ್ ಪ್ರಕರಣದಲ್ಲಿ, ಎಸ್.ಐ.ಟಿ. ಸೂಕ್ತ ತನಿಖೆ ನಡೆಸುತ್ತಿಲ್ಲ ಎಂದು, ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಆರೋಪಿಸಿದ್ದಾರೆ. ಮೈಸೂರಿನಲ್ಲಿ ಮಾತನಾಡಿದ ಅವರು, ಸಂತ್ರಸ್ತೆಯರಿಗೆ ನೆರವು ನೀಡುವ ಬದಲು, ಸರ್ಕಾರ ಹಿಂಸೆ ನೀಡುತ್ತಿದೆ ಎಂದು ದೂರಿದ್ದಾರೆ. ಪೆನ್‌ಡ್ರೈವ್ ಚಿತ್ರೀಕರಣ ಮಾಡಿದವರು ಹಾಗೂ ಹಂಚಿದವರ ಬಗ್ಗೆ ತನಿಖೆ ನಡೆಸದೇ, ಕೇವಲ ರಾಜಕಾರಣಿಗಳಿಗೆ ತೊಂದರೆ ನೀಡಲಾಗುತ್ತಿದೆ ಎಂದು, ಅವರು ಟೀಕಿಸಿದರು.

<><><>

ರೈತರ ಬ್ಯಾಂಕ್ ಖಾತೆಗಳಿಗೆ, ಜಮೆ ಆಗಿರುವ ಬರ ಪರಿಹಾರ ಹಣವನ್ನು, ಸಾಲಕ್ಕೆ ಜಮೆ ಮಾಡಿಕೊಳ್ಳದಂತೆ, ಎಲ್ಲ ಬ್ಯಾಂಕ್‌ಗಳಿಗೆ ಸರ್ಕಾರ ಸ್ಪಷ್ಟ ನಿರ್ದೇಶನ ನೀಡಬೇಕು ಎಂದು, ಮಾಜಿ ಮುಖ್ಯಮಂತ್ರಿ ಹೆಚ್.ಡಿ ಕುಮಾರಸ್ವಾಮಿ, ಇದೇ ಸಂದರ್ಭದಲ್ಲಿ ಆಗ್ರಹಿಸಿದರು.

<><><>

ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ ಎಂದು, ಮಾಜಿ ಉಪಮುಖ್ಯಮಂತ್ರಿ ಡಾಕ್ಟರ್ ಸಿ.ಎನ್.ಅಶ್ವತ್ಥನಾರಾಯಣ ಬೆಂಗಳೂರಿನಲ್ಲಿ ಆರೋಪಿಸಿದ್ದಾರೆ.

<><><>

ರಾಜ್ಯದಲ್ಲಿ ಅಪರಾಧಗಳ ಸಂಖ್ಯೆ ಹೆಚ್ಚುತ್ತಿದ್ದು, ಕಾನೂನು ಸುವ್ಯವಸ್ಥೆ ಕುಸಿದಿದೆ. ಸರ್ಕಾರ ಜನರಿಗೆ ರಕ್ಷಣೆ  ಒದಗಿಸುವಲ್ಲಿ ವಿಫಲವಾಗಿದೆ ಎಂದು, ಬಿಜೆಪಿ  ಪ್ರಧಾನ ಕಾರ್ಯದರ್ಶಿ ಪಿ. ರಾಜೀವ್ ಬೆಂಗಳೂರಿನಲ್ಲಿ ಟೀಕಿಸಿದ್ದಾರೆ.

<><><>

ದಾವಣಗೆರೆ, ತುಮಕೂರು, ರಾಯಚೂರು ಮತ್ತು ಕಲಬುರಗಿ, ಒಟ್ಟು 4 ಜಿಲ್ಲೆಗಳ, 4 ವಿಶ್ವವಿದ್ಯಾಲಯಗಳ ವ್ಯಾಪ್ತಿಯ, ಪದವಿ ಕಾಲೇಜುಗಳಲ್ಲಿ, 3 ವರ್ಷಗಳ ಪದವಿಯೊಂದಿಗೆ, ಕೌಶಲ ತರಬೇತಿ ನೀಡುವ, ಪ್ರಾಯೋಗಿಕ ಯೋಜನೆಯ ಕಾರ್ಯಸಾಧ್ಯತೆ ಪರಿಶೀಲಿಸುವ, ಚೊಚ್ಚಲ ಯೋಜನೆ ಮುಂಬರುವ ಶೈಕ್ಷಣಿಕ ವರ್ಷದಿಂದ, ಜಾರಿಗೊಳ್ಳಲಿದೆ ಎಂದು, ರಾಜ್ಯ ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ಆಯುಕ್ತ, ಜಿ.ಜಗದೀಶ್ ದಾವಣಗೆರೆಯಲ್ಲಿ, ತಿಳಿಸಿದ್ದಾರೆ.

<><><>

ಆಯುಕ್ತ ಜಿ. ಜಗದೀಶ್ ಧ್ವನಿ 30 ಸೆಕೆಂದುಗಳು

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಕರ್ನಾಟಕ, ತಮಿಳುನಾಡು, ಆಂಧ್ರಪ್ರದೇಶ ಮತ್ತು ಕೇರಳ ರಾಜ್ಯವನ್ನೊಳಗೊಂಡ ದಕ್ಷಿಣ ಭಾರತದ ನಾಲ್ಕು ರಾಜ್ಯಗಳು, ಎರಡನೇ ಬಾರಿಯ ಆನೆ ಗಣತಿಯನ್ನು, ಇದೇ 23, ಗುರುವಾರದಿಂದ ಆರಂಭಿಸಲಿವೆ. ಮೂರು ದಿನ ನಡೆಯುವ ಈ ಗಣತಿಯಲ್ಲಿ, ವಿವಿಧ ಮಾದರಿಗಳನ್ನು ಅನುಸರಿಸಿ ಆನೆಗಳ ಲೆಕ್ಕ ನಡೆಯಲಿದೆ. ನಿಗದಿತ ಪ್ರದೇಶದಲ್ಲಿ ಸುಮಾರು 15 ಕಿಲೋ ಮೀಟರ್ ದೂರವನ್ನು, ಗಣತಿ ತಂಡದ ನಾಲ್ಕೈದು ಸದಸ್ಯರು ಕ್ರಮಿಸಿ, ಗಣತಿ ಮಾಡುತ್ತಾರೆ. ಬೆಳಗ್ಗೆ 6 ರಿಂದ ಸಂಜೆ 6ರ ವರೆಗೆ ಕಾಲ್ನಡಿಗೆಯಲ್ಲೇ ಸಮೀಕ್ಷಾ ಕಾರ್ಯ ನಡೆಯಲಿದೆ. ಕಳೆದ ವರ್ಷ ದಕ್ಷಿಣ ಭಾರತದ ರಾಜ್ಯಗಳು, ಒಟ್ಟಾಗಿ ಮೊದಲ ಬಾರಿಗೆ ಆನೆ ಗಣತಿ ನಡೆಸಿ, ಒಟ್ಟು 2 ಸಾವಿರದ 961 ಆನೆಗಳಿರುವುದನ್ನು, ಖಾತ್ರಿ ಪಡಿಸಿದ್ದವು.

<><><>

'ಸಮುದಾಯದೊಂದಿಗೆ ಸೇರಿ, ಡೆಂಘೀ ನಿಯಂತ್ರಿಸೋಣ' ಎಂಬ ಧ್ಯೇಯದೊಂದಿಗೆ, ಬೆಂಗಳೂರು ನಗರ ವ್ಯಾಪ್ತಿಯಲ್ಲಿ, ರಾಷ್ಟ್ರೀಯ ಡೆಂಘೀ ದಿನಾಚರಣೆಗೆ ವಿಶೇಷ ಆಯುಕ್ತ ವಿಕಾಸ್ ಕಿಶೋರ್ ಸುರಳ್ಕರ್ ಚಾಲನೆ ನೀಡಿದರು.

ಬೆಂಗಳೂರಿನಲ್ಲಿ ಈ ವರೆಗೆ ಒಟ್ಟು 172 ಡೆಂಘೀ ಪ್ರಕರಣಗಳು ಪತ್ತೆಯಾಗಿವೆ.

<><><>

ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ, 53 ಡೆಂಘೀ ಜ್ವರ ಪ್ರಕರಣಗಳು ವರದಿಯಾಗಿವೆ.

<><><>

ಬಳ್ಳಾರಿ ಜಿಲ್ಲೆಯಲ್ಲಿ, ಸಾವಿರದ 720 ಶಂಕಿತ ಮಲೇರಿಯಾ ಪ್ರಕರಣಗಳು ವರದಿಯಾಗಿ, 52 ಪ್ರಕರಣಗಳು ದೃಢಪಟ್ಟಿವೆ ಎಂದು, ಡಾಕ್ಟರ್ ಅಬ್ದುಲ್ಲಾ ತಿಳಿಸಿದ್ದಾರೆ.

<><><>

ಶಿವಮೊಗ್ಗ ಜಿಲ್ಲೆಯಾದ್ಯಂತ, 180 ಡೆಂಘೀ ಜ್ವರ ಹಾಗೂ 133 ಚಿಕೂನ್ ಗುನ್ಯ ಜ್ವರ ಬಾಧೆಯ ಪ್ರಕರಣಗಳು ದಾಖಲಾಗಿವೆ ಎಂದು, ಜಿಲ್ಲಾ ಆರೋಗ್ಯಾಧಿಕಾರಿ ಡಾಕ್ಟರ್ ನಟರಾಜ್ ತಿಳಿಸಿದ್ದಾರೆ.

<><><>

ವಿಜಯನಗರ ಜಿಲ್ಲೆ, ಮಲೇರಿಯಾ ನಿಯಂತ್ರಣ ವೈದ್ಯಾಧಿಕಾರಿ, ಡಾಕ್ಟರ್ ಕಮಲಮ್ಮ, ಡೆಂಘೀ ಪ್ರಕರಣಗಳ ಕುರಿತು, ಜನ ಜಾಗ್ರತಿ ಕಾರ್ಯಕ್ರಮದಲ್ಲಿ, ಮಾಹಿತಿ ನೀಡಿದರು.

<><><>

ಡಾಕ್ಟರ್ ಕಮಲಮ್ಮ ಧ್ವನಿ 28 ಸೆಕೆಂದುಗಳು

<><><>

ಮಾವು ಬೆಳೆಗಾರರು ಹಾಗೂ ಗ್ರಾಹಕರ ಮಧ್ಯೆ, ನೇರ ಸಂಪರ್ಕ ಕಲ್ಪಿಸಿ, ತೋಟಿಗರಿಗೆ ಯೋಗ್ಯ ಬೆಲೆ ಹಾಗೂ ಕೊಳ್ಳುವವರಿಗೆ, ಅತ್ಯುತ್ತಮ ಗುಣಮಟ್ಟದ ಮಾವು ದೊರಕಿಸಲು, ಧಾರವಾಡ ತೋಟಗಾರಿಕೆ ಇಲಾಖೆ ಆಯೋಜಿಸಿದ, ಮೂರು ದಿನಗಳ ಮಾವು ಮೇಳಕ್ಕೆ ವ್ಯಾಪಕ ಜನ ಸ್ಪಂದನೆ ದೊರಕಿದೆ. ಮೇಳವನ್ನು ಭಾನುವಾರ 19ರ ವರೆಗೆ ವಿಸ್ತರಿಸಲಾಗಿದೆ.

ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಧಾರವಾಡ ಜಿಲ್ಲೆ ತೋಟಗಾರಿಕೆ ಇಲಾಖೆ ಉಪ ನಿರ್ದೇಶಕ, ಕಾಶೀನಾಥ ಭದ್ರಣ್ಣವರ್.

<><><>

ಕಾಶೀನಾಥ ಭದ್ರಣ್ಣವರ್ ಧ್ವನಿ 25 ಸೆಕೆಂದುಗಳು

<><><>

ಫುಟ್ ಬಾಲ್ ಕ್ರೀಡೆಗೆ ಅಭಿಮಾನಿಗಳ ದೊಡ್ಡ ಬಳಗವನ್ನೇ ಸೃಷ್ಟಿಸಿದ, ಬೆಂಗಳೂರು ಫುಟ್‌ಬಾಲ್ ಕ್ಲಬ್ ನಾಯಕ, ಸುನಿಲ್ ಚೆಟ್ರಿ ಗುರುವಾರ ಅಂತಾರಾಷ್ಟ್ರೀಯ ಪಂದ್ಯಗಳಿಗೆ ವಿದಾಯ ಘೋಷಿಸಿದ್ದಾರೆ. 19 ವರ್ಷಗಳ ಕಾಲ, ಭಾರತವನ್ನು ಪ್ರತಿನಿಧಿಸಿದ ಸುನಿಲ್ ಚೆಟ್ರಿ ಘೋಷಿಸಿದ ವಿದಾಯ, ಫುಟ್‌ಬಾಲ್ ಕ್ರೀಡೆಯ ಒಂದು ಯುಗದ ಅಂತ್ಯವೆಂದು ಬಣ್ಣಿಸಲಾಗಿದೆ. ಭಾರತದ ಪರವಾಗಿ ಅತೀ ಹೆಚ್ಚು ಗೋಲ್ ಮಾಡಿದ, ಅತೀ ಹೆಚ್ಚು ಪಂದ್ಯಗಳನ್ನಾಡಿದ, ವಿಶ್ವ ಫುಟ್‌ಬಾಲ್ ಕ್ರೀಡಾಪಟುಗಳ ಪೈಕಿ 3ನೇ ಸ್ಥಾನದಲ್ಲಿರುವ ಸುನಿಲ್ ಚೆಟ್ರಿ, ಜೂನ್ 6 ರಂದು, ಕೋಲ್ಕೊತ್ತಾದಲ್ಲಿ ಕುವೈತ್‌ನ ವಿರುದ್ಧ ಕೊನೆಯ ಪಂದ್ಯದಲ್ಲಿ, ಭಾರತವನ್ನು ಪ್ರತಿನಿಧಿಸಲಿದ್ದಾರೆ. ಸುನಿಲ್ ತಂದೆ ಕೆ.ಬಿ. ಚೆಟ್ರಿ ಸೈನ್ಯಾಧಿಕಾರಿಯಾಗಿದ್ದವರು. ತಾಯಿ ಸುಶೀಲಾ ನೇಪಾಳ ಫುಟ್‌ಬಾಲ್ ಕ್ಲಬ್ ತಂಡವನ್ನು ಪ್ರತಿನಿಧಿಸಿದ ಆಟಗಾರ್ತಿ.

<><><>

ರಾಯಲ್ ಮೈಸೂರು ಸೇಲಿಂಗ್ ಕ್ಲಬ್ ಹಾಗೂ ರಾಜ್ಯ ವಿಶೇಷಚೇತನರ ಕ್ರೀಡಾ ಸಂಸ್ಥೆ ಸಹಯೋಗದಲ್ಲಿ, ಕೃಷ್ಣ ರಾಜಸಾಗರ ಜಲಾಶಯದ ಹಿನ್ನೀರಿನಲ್ಲಿ, ಪ್ಯಾರಾ ಸೇಲಿಂಗ್ ತರಬೇತಿ ಗುರುವಾರ ಆರಂಭವಾಗಿದೆ. ರಾಜ್ಯದ ವಿವಿಧೆಡೆಯಿಂದ ಆಗಮಿಸಿರುವ, 12 ಜನ ಪುರುಷ ಹಾಗೂ ಮಹಿಳಾ ಅಥ್ಲೀಟ್‌ಗಳಿಗೆ, ಮಂಡ್ಯ ಜಿಲ್ಲೆ ಪಾಂಡವಪುರ ತಾಲೂಕು, ಗಿರಿಯಾರಹಳ್ಳಿ ಹಿನ್ನೀರಿನಲ್ಲಿ, ಪ್ಯಾರಾ ಸೇಲಿಂಗ್ ತರಬೇತಿ ಆರಂಭವಾಗಿದೆ.

<><><>

ಹಾಸನದ ಆಲೂರು ತಾಲೂಕಿನ, ಕದಾಳು ಸಮೀಪ ಮುತ್ತಿಗೆ ಗ್ರಾಮದಲ್ಲಿ, ಕೆರೆಯಲ್ಲಿ ಈಜಲು ಹೋಗಿದ್ದ, ಐವರ ಪೈಕಿ ನಾಲ್ವರು ಮಕ್ಕಳು, ನೀರು ಪಾಲಾಗಿದ್ದಾರೆ. ಶಾಲೆಗೆ ರಜೆ ಇದ್ದ ಕಾರಣ, ಕೆರೆಯಲ್ಲಿ ಈಜಲು ಹೋಗಿದ್ದರು ಎನ್ನಲಾಗಿದೆ. 13 ವರ್ಷದ ಜೀವನ್, 11 ವರ್ಷದ ಸಾತ್ವಿಕ್, 12 ವರ್ಷದ ವಿಶ್ವ ಹಾಗೂ ಪೃಥ್ವಿ ಮೃತಪಟ್ಟಿದ್ದಾರೆ. ನೀರಿನಲ್ಲಿ ಮುಳುಗಿ ಅಸ್ವಸ್ಥಗೊಂಡಿರುವ ಚಿರಾಗನನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ.

<><><>

ಈ ಬಾರಿಯ ನೈಋತ್ಯ ಮುಂಗಾರು ಮಳೆ, ಮೇ 31 ಕ್ಕೆ ಕೇರಳ ಪ್ರವೇಶಿಸಲಿದೆ. ರಾಜ್ಯದ ಕೆಲವು ಪ್ರದೇಶಗಳಲ್ಲಿ, ಭಾನುವಾರದ ವರೆಗೆ ಭಾರೀ ಮಳೆಯಾಗುವ ಸಾಧ್ಯತೆ ಇದೆ ಎಂದು, ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

<><><>

ಶಿರಾಲಿಯಲ್ಲಿ ಗರಿಷ್ಠ 37 ದಶಾಂಶ 4 ಡಿಗ್ರಿ ಸೆಲ್ಸಿಯೆಸ್ ತಾಪಮಾನ ದಾಖಲಾಗಿದೆ. ಮುಂದಿನ 5 ದಿನಗಳಲ್ಲಿ ಗರಿಷ್ಠ ತಾಪಮಾನ 2 ರಿಂದ 4 ಡಿಗ್ರಿ ಸೆಲ್ಸಿಯೆಸ್ ಇಳಿಕೆ ಸಾಧ್ಯತೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ಐ.ಸಿ.ಸಿ. ಪುರುಷರ ಟಿ–20 ವಿಶ್ವ ಕಪ್ ಟೂರ್ನಿ; ಅಂತಾರಾಷ್ಟ್ರೀಯ ಕ್ರಿಕೆಟಿಗರ ಜೆರ್ಸಿ ಮೇಲೆ, ನಂದಿನಿ ಬ್ರ್ಯಾಂಡ್ – ಮುಖ್ಯಮಂತ್ರಿ ಸಿದ್ದರಾಮಯ್ಯ.
- ಯುವತಿಯರ ಹತ್ಯೆ ಪ್ರಕರಣಗಳ ವಿಚಾರಣೆಗೆ, ವಿಶೇಷ ಅಭಿಯೋಜಕರ ನೇಮಕಕ್ಕೆ ಚಿಂತನೆ – ಜಿ. ಪರಮೇಶ್ವರ.
- ಕರ್ನಾಟಕ ಸೇರಿ, ದಕ್ಷಿಣ ಭಾರತದ ನಾಲ್ಕು ರಾಜ್ಯಗಳಲ್ಲಿ, ಇದೇ 23 ರಿಂದ, ಆನೆ ಗಣತಿ.
- ಭಾರತೀಯ ಫುಟ್‌ಬಾಲ್ ದಿಗ್ಗಜ ಸುನಿಲ್ ಚೆಟ್ರಿ, ಅಂತಾರಾಷ್ಟ್ರೀಯ ಪಂದ್ಯಗಳಿಗೆ ವಿದಾಯ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಈ ಬೆಳಗ್ಗೆ 7.35 ಕ್ಕೆ.

<><><>

ಹರ್ಷ